1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಿರು ಮತ್ತು ಪ್ರ.ದ.ನ್ಯಾ.ದಂ. ಯವರ
ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 1930/2023

ಸಿ.ಡಬ್ಲ್ಯೂ ಃ1

ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ**

ದಿನಾಂಕ 25.07.2016 ರ ಕರಾರಿನಲ್ಲಿ ಒಳಗೊಂಡಿರುವ ಬೋಟ್‌ನ್ನು 2ನೇ ಆರೋಪಿಯು ಮಾರಾಟ ಮಾಡಿದ್ದು, ಈಗ ಸದ್ರಿ ಬೋಟು ಇರುವುದಿಲ್ಲ. ವ್ಯವಹಾರಕ್ಕಾಗಿ ನಾನು ರೂ.15,97,500/- ಮೊತ್ತವನ್ನು ಬಂಡವಾಳವಾಗಿ ಹೂಡಿದ್ದು, ಅದರಲ್ಲಿನ ಲಾಭಾಂಶವನ್ನು ನನಗೆ ನೀಡಿಲ್ಲದೇ ಹಣವನ್ನು ಕಬಳಿಸಿರುತ್ತಾರೆ. 3ನೇ ಆರೋಪಿಯು ತನ್ನ ಮಾವನ ಜಾಗವನ್ನು ಪರಿವರ್ತಿಸಿ ಸಾಲ ಮಾಡಿಸಿಕೊಡುವಂತೆ ನನಗೆ ಆಶ್ವಾಸನೆ ನೀಡಿದ್ದು, ನಾನು ಅದರ ದಾಖಲಾತಿ ತಯಾರಿಗಾಗಿ ರೂ.1,50,000/- ಹಣವನ್ನು ಖರ್ಚು ಮಾಡಿರುತ್ತೇನೆ. ಸದ್ರಿ ಸಾಲವನ್ನು ಮಂಜೂರು ಮಾಡದಂತೆ ಆರೋಪಿತರು ತಡೆ ಮಾಡಿ ಮೋಸ ಮಾಡಿರುತ್ತಾರೆ. ಆರೋಪಿತರಿಂದ ನನಗೆ ಇಲ್ಲಿಯವರೆಗೆ ಒಟ್ಟಾರೆ ರೂ.23,00,000/- ನಷ್ಟವಾಗಿರುತ್ತದೆ.

**ಪಾಟೀ ಸವಾಲು ಮಾಡಲು ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ